## ಮಂಗಳೂರು ವಿಶ್ವವಿದ್ಯಾನಿಲಯ

**ದಿನಾಂಕ 16.05.2019 ರಂದು ಪೂರ್ವಾಹ್ನ ಗಂಟೆ 11:00ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2019ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡಾವಳಿಗಳು.**

**ಉಪಸ್ಥಿತ ಸದಸ್ಯರು :**

**ಅನುಪಸ್ಥಿತ ಸದಸ್ಯರು:**

ಪ್ರಾರಂಭದಲ್ಲಿ ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು.

**I ನಡಾವಳಿಗಳ ದೃಢೀಕರಣ**

ಅ) ದಿನಾಂಕ 27.03.2019 ರಂದು ನಡೆದ 2019ನೇ ಸಾಲಿನ ಸಿಂಡಿಕೇಟಿನ ಪ್ರಥಮ ಸಾಮಾನ್ಯ ಸಭೆಯ ನಡಾವಳಿಯಲ್ಲಿ ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.1:262(2019)ರ ನಿರ್ಣಯವನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಿ ದೃಢೀಕರಿಸಲಾಯಿತು.

1) ಸದರಿ ವಿಭಾಗದಲ್ಲಿ ಬೇರೆ ಯಾವುದೇ ಅರ್ಹ ಪ್ರಾಧ್ಯಾಪಕರು/ಸಹಪ್ರಾಧ್ಯಾಪಕರು ಲಭ್ಯವಿಲ್ಲದೆ ಇರುವುದರಿಂದ ದಿನಾಂಕ 30.06.2019ರವರೆಗೆ ಈ ಕೆಳಕಂಡವರನ್ನೇ ಅಧ್ಯಕ್ಷರನ್ನಾಗಿ ಮುಂದುವರೆಸಲು ನಿರ್ಣಯಿಸಲಾಯಿತು.

   1. ವಸ್ತು ವಿಜ್ಞಾನ ವಿಭಾಗ – ಪ್ರೊ. ಮಂಜುನಾಥ ಪಟ್ಟಾಭಿ.
   2. ಕೈಗಾರಿಕಾ ರಸಾಯನಶಾಸ್ತ್ರ ವಿಭಾಗ– ಪ್ರೊ. ಬಿ.ಕೆ. ಸರೋಜಿನಿ.

2) ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟು:ಸಾ.ಸ.1:267(2019)ರ ನಿರ್ಣಯವನ್ನು ಈ ಕೆಳಕಂಡಂತೆ ತಿದ್ದುಪಡಿ ಮಾಡಿ ದೃಢೀಕರಿಸಲಾಯಿತು.

   "ಡಾ. ನಾಗಪ್ಪಗೌಡ ಆರ್. ಅಧ್ಯಕ್ಷರು, ಕನ್ನಡ ವಿಭಾಗ ಇವರ ಮನವಿಯನ್ನು ಪರಿಗಣಿಸಿ ವಿಶ್ವವಿದ್ಯಾನಿಲಯದ ವಿಶೇಷಾಧಿಕಾರಿ ಹುದ್ದೆಯಲ್ಲಿರುವವರೆಗೆ ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗದ ಅಧ್ಯಕ್ಷರ ಹುದ್ದೆಯಿಂದ ತಾತ್ಕಾಲಿಕವಾಗಿ ಬಿಡುಗಡೆಗೊಳಿಸಲು ನಿರ್ಣಯಿಸಲಾಯಿತು. ಸದರಿ ವಿಭಾಗಕ್ಕೆ ಅಧ್ಯಕ್ಷರನ್ನಾಗಿ ಮುಂದಿನ ಸರದಿಯಲ್ಲಿ ಜೇಷ್ಠತೆಯಲ್ಲಿರುವ ಪ್ರೊ. ಅಭಯ್ ಕುಮಾರ್ ಕೆ., ಪ್ರಾಧ್ಯಾಪಕರು ಇವರನ್ನು ದಿನಾಂಕ 30.06.2019ರವರೆಗೆ ನೇಮಿಸಲು ನಿರ್ಣಯಿಸಲಾಯಿತು."

3) ಸದರಿ ನಡಾವಳಿಯ ಇತರೆ ವಿಷಯಗಳಲ್ಲಿ ಕ್ರಮ ಸಂ. 3 ನ್ನು ಈ ಕೆಳಗಿನಂತೆ ತಿದ್ದುಪಡಿ ಮಾಡಿ ದೃಢೀಕರಿಸಲಾಯಿತು.

   "ಮತ್ತೋರ್ವ ಸದಸ್ಯರು ವಿಶ್ವವಿದ್ಯಾನಿಲಯದ M.Sc. Bio-Technologyಕೋರ್ಸ್‌ಗೆ ಸೇರ್ಪಡೆಗೊಳ್ಳಲು M.B.B.S., B.N.Y.S., B.A.M.S., B.H.M.S. ಹಾಗೂ ಇತರೆ ವೈದ್ಯಕೀಯ ಕೋರ್ಸ್‌ಗಳ ಪದವೀಧರರಿಗೂ ಅವಕಾಶ ಕಲ್ಪಿಸುವಂತೆ ಕೋರಿದ ಹಿನ್ನಲೆಯಲ್ಲಿ ಈ ಬಗ್ಗೆ ಕುಲಸಚಿವರು ಸದರಿ ವಿಷಯದ ಅಧ್ಯಯನ ಮಂಡಳಿಯ ಅಧ್ಯಕ್ಷರೊಂದಿಗೆ ಚರ್ಚಿಸಿ ಮುಂದಿನ ಕ್ರಮಕೈಗೊಳ್ಳವಂತೆ ನಿರ್ಣಯಿಸಲಾಯಿತು.

   ಮೇಲಿನ ತಿದ್ದುಪಡಿಗಳೊಂದಿಗೆ ದಿನಾಂಕ 27.03.2019 ರಂದು ನಡೆದ 2019ನೇ ಸಾಲಿನ ಸಿಂಡಿಕೇಟಿನ ಪ್ರಥಮ ಸಾಮಾನ್ಯ ಸಭೆಯ ನಡಾವಳಿಗಳನ್ನು ದೃಢೀಕರಿಸಲಾಯಿತು.

ಆ) ದಿನಾಂಕ 12.04.2019 ರಂದು ಘಟಿಕೋತ್ಸವದ ಪೂರ್ವಭಾವಿಯಾಗಿ ನಡೆದ ಸಿಂಡಿಕೇಟಿನ 2019ನೇ ಸಾಲಿನ ಪ್ರಥಮ ವಿಶೇಷ ಸಭೆಯ ನಡಾವಳಿಯ ಕುರಿತು ಸದಸ್ಯರಿಂದ ಯಾವುದೇ ಆಕ್ಷೇಪಣೆಗಳು ಬಾರದೆ ಇರುವುದರಿಂದ ಸದರಿ ನಡಾವಳಿಗಳನ್ನು ದೃಢೀಕರಿಸಲಾಯಿತು.

**II ಅನುಸರಣಾ ವರದಿಯ ಅನುಮೋದನೆ**

ದಿನಾಂಕ 22.12.2018 ರಂದು ನಡೆದ 2018ನೇ ಸಾಲಿನ ಸಿಂಡಿಕೇಟಿನ ಎಂಟನೇ ಸಾಮಾನ್ಯ ಸಭೆಯ ನಿರ್ಣಯಗಳ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯನ್ನು ಅನುಮೋದಿಸಲಾಯಿತು.

**III ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:-**

**ಕಾರ್ಯಸೂಚಿ ಸಂಖ್ಯೆ:** ಸಿಬ್ಬಂದಿ:ಸಾ.ಸ.2:01 (2019)

**ವಿಷಯ :** 7ನೇ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ವಿಶ್ವವಿದ್ಯಾನಿಲಯ ಹಾಗೂ ಘಟಕ ಕಾಲೇಜುಗಳ ಬೋಧಕರಿಗೆ, ಗ್ರಂಥಪಾಲಕರಿಗೆ ಮತ್ತು ದೈಹಿಕ ಶಿಕ್ಷಣ ಸಿಬ್ಬಂದಿಗಳಿಗೆ ವಿಸ್ತರಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:** ಸಾ.ಸ.2: 02(2019)

**ವಿಷಯ :** ಡಾ. ಅಬ್ಬೋಕ್ಕರ್ ಸಿದ್ಧಿಕ್, ಸಹಪ್ರಾಧ್ಯಾಪಕರು ಹಾಗೂ ಸಂಯೋಜಕರು ವಾಣಿಜ್ಯಶಾಸ್ತ್ರ ವಿಭಾಗ, ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇವರಿಗೆ ದಿನಾಂಕ 24.04.2019 ರಿಂದ 25.04.2019ರವರೆಗೆ College of Banking and Financial Studies, Muscat, Oman ಇಲ್ಲಿ ನಡೆಯಲಿರುವ "International Conference" ನಲ್ಲಿ ಭಾಗವಹಿಸಲು ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:**ಸಾ.ಸ.2: 03(2019)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಡೀನರುಗಳನ್ನು Vocation prevented staff ಎಂದು ಪರಿಗಣಿಸಿ ಬಿಡುವು ರಜೆ ತಡೆಗೆ ಹೆಚ್ಚುವರಿ ಗಳಿಕೆ ರಜಾ ಸೌಲಭ್ಯ ನೀಡುವ ಬಗ್ಗೆ.

**ನಿರ್ಣಯ:** ಡೀನರುಗಳನ್ನು Vacation prevented staff ಎಂದು ಪರಿಗಣಿಸಿ ಬಿಡುವು ರಜೆ ತಡೆಗೆ ಹೆಚ್ಚುವರಿ ಗಳಿಕೆ ರಜಾ ಸೌಲಭ್ಯವನ್ನು ಜನವರಿ 2019 ರಿಂದ ಅನ್ವಯವಾಗುವಂತೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ. ಘಟಕ :**ಸಾ.ಸ.2: 04(2019)

**ವಿಷಯ :** ಶ್ರೀ ಭಾಸ್ಕರ್ ಎ., ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ವಾಣಿಜ್ಯ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಹಾಗೂ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ.

**ನಿರ್ಣಯ:** ಆರ್ಥಿಕ ಸಹಾಯಧನದೊಂದಿಗೆ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ. ಘಟಕ :**ಸಾ.ಸ.2: 05(2019)

**ವಿಷಯ :** ಶ್ರೀ ಪರಶುರಾಮ, ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಹಾಗೂ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ.

**ನಿರ್ಣಯ:** ಆರ್ಥಿಕ ಸಹಾಯಧನದೊಂದಿಗೆ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪ.ಜಾ.ಪ.ಪಂ. ಘಟಕ :**ಸಾ.ಸ.2: 06(2019)

**ವಿಷಯ :** ಶ್ರೀ ಹರೀಶ್ ಕೆ.ಎಸ್., ಸಂಶೋಧನಾ ವಿದ್ಯಾರ್ಥಿ, ಸ್ನಾತಕೋತ್ತರ ಭೌತಶಾಸ್ತ್ರ ವಿಭಾಗ ಇವರಿಗೆ ವಿದೇಶದಲ್ಲಿ ನಡೆಯುವ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಿ ಹಾಗೂ ಸಂಶೋಧನಾ ಪತ್ರಿಕೆಯನ್ನು ಮಂಡಿಸಲು ಅನುಮತಿ ಹಾಗೂ ತತ್ಸಂಬಂಧ ತಗಲುವ ಆರ್ಥಿಕ ಸಹಾಯಧನ ನೀಡುವ ಬಗ್ಗೆ.

**ನಿರ್ಣಯ:** ಆರ್ಥಿಕ ಸಹಾಯಧನದೊಂದಿಗೆ ಅಂತರರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸಲು ಅನುಮತಿ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:**ಸಾ.ಸ.2: 07(2019)

**ವಿಷಯ :** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ಪ್ರಧಾನ ಆಟದ ಮೈದಾನದಲ್ಲಿ ಡಾ. ದಯಾನಂದ ಪೈ ಮತ್ತು ಸತೀಶ್ ಪೈ ಕಟ್ಟಡಕ್ಕೆ ತಾಗಿಕೊಂಡು ಸಭಾ ವೇದಿಕೆ ನಿರ್ಮಾಣಕ್ಕೆ ಅನುಮತಿ ನೀಡುವ ಬಗ್ಗೆ.

**ನಿರ್ಣಯ:** ಸಭಾ ವೇದಿಕೆ ನಿರ್ಮಾಣಕ್ಕೆ ಅನುಮತಿ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:**ಸಾ.ಸ.2: 08(2019)

**ವಿಷಯ :** M/s. Renew Solar Energy Pvt. Ltd.,ನವದೆಹಲಿ ಇವರೊಂದಿಗೆ Power Purchase Agreement ಮಾಡಿಕೊಂಡಿರುವ ಬಗ್ಗೆ ಘಟನೋತ್ತರ ಅನುಮೋದನೆ ಬಗ್ಗೆ.

**ನಿರ್ಣಯ:** ಒಡಂಬಡಿಕೆಗೆ ಘಟನೋತ್ತರ ಅನುಮೋದನೆ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:**ಸಾ.ಸ.2: 09(2019)

**ವಿಷಯ :** USIC – ಉಪಕರಣಗಳ ಬಳಕೆ ಶುಲ್ಕ ನಿಗದಿಯ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:**ಸಾ.ಸ.2: 10(2019)

**ವಿಷಯ :** ಸಲಹಾ ಸಮಿತಿ ಸಭೆಯ ನಡಾವಳಿಯನ್ನು ತಿದ್ದುಪಡಿ ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಪರೀಕ್ಷಾಂಗ:**ಸಾ.ಸ.2: 11(2019)

**ವಿಷಯ :** ಅಕ್ಟೋಬರ್/ನವೆಂಬರ್/ಡಿಸೆಂಬರ್ 2018 ಮತ್ತು ಜನವರಿ 2019ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪರೀಕ್ಷೆಗಳಲ್ಲಿ ವಿದ್ಯಾರ್ಥಿಗಳು ನಡೆಸಿದ ಅವ್ಯವಹಾರಗಳು – ದಂಡನೆಯನ್ನು ದೃಢಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟ್ :**ಸಾ.ಸ.2:12(2019)

**ವಿಷಯ :** ಸ್ನಾತಕೋತ್ತರ ಸಂಖ್ಯಾಶಾಸ್ತ್ರ ಅಧ್ಯಯನ ಮಂಡಳಿ ಮತ್ತು ಪದವಿ ಮಟ್ಟದ ಸಂಖ್ಯಾಶಾಸ್ತ್ರ ಅಧ್ಯಯನ ಮಂಡಳಿಗಳ ಅಧ್ಯಕ್ಷರ ನೇಮಕಾತಿ ಬಗ್ಗೆ.

**ನಿರ್ಣಯ:** ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:**ಸಾ.ಸ.2:13(2019)

**ವಿಷಯ :** ಗ್ರಂಥಾಲಯದ ಪುಸ್ತಕಗಳನ್ನು ಕಳೆದುಕೊಂಡಲ್ಲಿ ದಂಡ ಶುಲ್ಕ ನಿಗದಿಪಡಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:**ಸಾ.ಸ.2:14(2019)

**ವಿಷಯ :** ಕರ್ನಾಟಕ ಸ್ಟೇಟ್ ಕೌನ್ಸಿಲ್ ಆಫ್ ಇಂಟರ್ ಮೀಡಿಯೇಟ್ ಆಂಡ್ ಹೈಯರ್ ಎಜ್ಯುಕೇಷನ್, ಮೈಸೂರು ನಡೆಸುವ ಸೀನಿಯರ್ ಸೆಕೆಂಡರಿ ಪರೀಕ್ಷೆ ಪಾಸಾಗಿರುವ ವಿದ್ಯಾರ್ಥಿಗಳ ಪ್ರವೇಶಾತಿ ಅನುಮೋದನೆ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು ಹಾಗೂ ಇನ್ನು ಮುಂದೆ ಇಂತಹ ಕೋರ್ಸ್‌ಗಳನ್ನು ತತ್ಸಮಾನವೆಂದು ಪರಿಗಣಿಸಲು ಬೇರೆ ರಾಜ್ಯಗಳಲ್ಲಿ/ವಿಶ್ವವಿದ್ಯಾನಿಲಯಗಳಲ್ಲಿ/ಸರ್ಕಾರಿ ಹಾಗೂ ಅನುದಾನಿತ ಸಂಸ್ಥೆಗಳಲ್ಲಿ ಪ್ರವೇಶ ನೀಡಲಾಗಿದೆಯೇ ಎಂಬುದನ್ನು ವೆಬ್‌ಸೈಟ್‌ನಲ್ಲಿ ಶೋಧನೆ ಮಾಡಿ ಮಾಹಿತಿ ಸಂಗ್ರಹಿಸಿ ನೀಡುವಂತೆ ನಿರ್ದೇಶಕರು, ಪಿ.ಎಂ.ಇ.ಬಿ. ಇವರಿಗೆ ಸೂಚಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಆಡಳಿತ :**ಸಾ.ಸ.2:15(2019)

**ವಿಷಯ :** ಪ್ರಸಾದ್ ನೇತ್ರಾಲಯ, ಸೂಪರ್ ಸ್ಪೆಷಾಲಿಟಿ ಐ ಹಾಸ್ಪಿಟಲ್, ಅಲಂಕಾರ್, ಉಡುಪಿ ಇದನ್ನು ವೈದ್ಯಕೀಯ ವೆಚ್ಚ ಮರುಭರಣೆಗೆ ಮಂಗಳೂರು ವಿಶ್ವವಿದ್ಯಾನಿಲಯ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸುವ ಬಗ್ಗೆ.

**ನಿರ್ಣಯ:** ಪ್ರಸಾದ್ ನೇತ್ರಾಲಯ, ಸೂಪರ್ ಸ್ಪೆಷಾಲಿಟಿ ಐ ಹಾಸ್ಪಿಟಲ್, ಅಲಂಕಾರ್, ಉಡುಪಿ ಇದನ್ನು ವೈದ್ಯಕೀಯ ವೆಚ್ಚ ಮರುಭರಣೆಗೆ ಮಂಗಳೂರು ವಿಶ್ವವಿದ್ಯಾನಿಲಯ ಪರಿಗಣಿಸಿದ ಆಸ್ಪತ್ರೆಗಳ ಪಟ್ಟಿಯಲ್ಲಿ ಸೇರಿಸಲು ನಿರ್ಣಯಿಸಲಾಯಿತು ಹಾಗೂ ವೈದ್ಯಕೀಯ ವೆಚ್ಚ ಮರುಭರಣೆ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಬ್ಬಂದಿ:**ಸಾ.ಸ.2:16(2019)

**ವಿಷಯ :** ದಿನಾಂಕ 01.01.2016ರ ಪರಿಷ್ಕೃತ ಯುಜಿಸಿ 7ನೇ ವೇತನ ಶ್ರೇಣಿ/ಸಂಬಂಧಿಸಿದ ಆದೇಶಗಳನ್ವಯ ಪರಿಷ್ಕೃತ ವೇತನ ಶ್ರೇಣಿಯ ವಿವಿಧ ಸೌಲಭ್ಯಗಳನ್ನು ವಿಸ್ತರಿಸಲು ರಚಿಸಿದ ಕರಡು ಪರಿನಿಯಮ/ಅನುಶಾಸನವನ್ನು ಅನುಮೋದಿಸುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:**ಡಿಇವಿ:ಸಾ.ಸ.2: 17(2019)

**ವಿಷಯ :** ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವ ಶಿಕ್ಷಕರಿಗೆ ಆರ್ಥಿಕ ಸಹಾಯವನ್ನು ವಿಶ್ವವಿದ್ಯಾನಿಲಯದಿಂದ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:**ಡಿಇವಿ:ಸಾ.ಸ.2: 18(2019)

**ವಿಷಯ :** ವಿದೇಶದಲ್ಲಿ ನಡೆಯುವ ಅಂತರಾಷ್ಟ್ರೀಯ ಸಮ್ಮೇಳನದಲ್ಲಿ ಭಾಗವಹಿಸುವ ಶಿಕ್ಷಕರಿಗೆ ಆರ್ಥಿಕ ಸಹಾಯವನ್ನು ವಿಶ್ವವಿದ್ಯಾನಿಲಯದಿಂದ ಮಂಜೂರು ಮಾಡುವ ಬಗ್ಗೆ.

**ನಿರ್ಣಯ:** ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:**ಡಿಇವಿ:ಸಾ.ಸ.2: 19(2019)

**ವಿಷಯ :** ದೂರಶಿಕ್ಷಣ ಕೇಂದ್ರದ 2019–20ನೇ ಸಾಲಿನ ವಿವಿಧ ಕೋರ್ಸ್‌ಗಳ ಅಧ್ಯಯನ ಸಾಮಾಗ್ರಿ ಪುಸ್ತಕಗಳ ಮುಖಪುಟ ಮುದ್ರಣ, ಜೆರಾಕ್ಸ್ ಹಾಗೂ ಬೈಂಡಿಂಗ್ ಕಾರ್ಯದ ಟೆಂಡರು ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:**ಡಿಇವಿ:ಸಾ.ಸ.2: 20(2019)

**ವಿಷಯ :** BRNS CRP, CARER – Computer Workstation ಖರೀದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:**ಡಿಇವಿ:ಸಾ.ಸ.2: 21(2019)

**ವಿಷಯ :** DST – SERB ಪ್ರಾಜೆಕ್ಟ್ - Refrigerated Micro Centrifuge ಮತ್ತು Inverted Phase Contrast Microscope ಉಪಕರಣ ಖರೀದಿಗೆ ಸಂಬಂಧಿಸಿದ ಪ್ರಸ್ತಾವನೆ ಮಂಜೂರಾತಿ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:**ಡಿಇವಿ:ಸಾ.ಸ.2: 22(2019)

**ವಿಷಯ :** BRNS CRP, CARER – Ambient Aerosol Monitor ಖರೀದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:**ಡಿಇವಿ:ಸಾ.ಸ.2: 23(2019)

**ವಿಷಯ :** VGST ಪ್ರಾಜೆಕ್ಟ್, ಇಲೆಕ್ಟ್ರಾನಿಕ್ಸ್ ವಿಭಾಗ – Microwave test bench equipment and Mentor graphics IE3D simulation software ಖರೀದಿ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:**ಡಿಇವಿ:ಸಾ.ಸ.2: 24(2019)

**ವಿಷಯ :** SERB-ECR ಪ್ರಾಜೆಕ್ಟ್, ವಸ್ತುವಿಜ್ಞಾನ ವಿಭಾಗ – Aerosol/Spray thin film Deposition System - ಉಪಕರಣ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:**ಸಿಬ್ಬಂದಿ:ಸಾ.ಸ.2: 25(2019)

**ವಿಷಯ :** ಮಂಗಳೂರು ವಿಶ್ವವಿದ್ಯಾನಿಲಯದ Statute Relating to Absorption of Temporary Non-Teaching Employees Working in Mangalore University, Against Similar Sanctioned Posts of Mangalore University and Counting of Past Services ರ ಅನುಮೋದನೆ ಬಗ್ಗೆ.

**ನಿರ್ಣಯ:** ಮುಂದೂಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟ್ :**ಸಾ.ಸ.2:26(2019)

**ವಿಷಯ :** ಸ್ನಾತಕೋತ್ತರ ವಿಭಾಗಗಳ ಅಧ್ಯಕ್ಷರ ನೇಮಕಾತಿಯ ಬಗ್ಗೆ.

**ನಿರ್ಣಯ:** ಸ್ನಾತಕೋತ್ತರ ವಿಭಾಗಗಳಿಗೆ ಈ ಕೆಳಗಿನಂತೆ ಅಧ್ಯಕ್ಷರ/ಪ್ರಭಾರ ಅಧ್ಯಕ್ಷರನ್ನು ನೇಮಿಸಲು ನಿರ್ಣಯಿಸಲಾಯಿತು.

| **ಕ್ರ. ಸಂ.** | **ವಿಭಾಗ** | **ನೇಮಕಗೊಳಿಸಿದ ಪದನಾಮ** | **ಅಧ್ಯಕ್ಷರು/ ಪ್ರಭಾರ ಅಧ್ಯಕ್ಷರ ಹೆಸರು** |
|---|---|---|---|
| 1 | ಸ್ನಾತಕೋತ್ತರ ಸಮೂಹ ಸಂಹವನ ಮತ್ತು ಪತ್ರಿಕೋದ್ಯಮ ಅಧ್ಯಯನ ವಿಭಾಗ | ಪ್ರಭಾರ ಅಧ್ಯಕ್ಷರು (ದಿನಾಂಕ 01.07.2019 ರಿಂದ ಮುಂದಿನ ಆದೇಶದವರೆಗೆ) | ಪ್ರೊ. ಪಿ.ಎಲ್. ಧರ್ಮ, ಪ್ರಾಧ್ಯಾಪಕರು, ಸ್ನಾತಕೋತ್ತರ ರಾಜ್ಯಶಾಸ್ತ್ರ ವಿಭಾಗ/ಡೀನರು, ಕಲಾ ನಿಕಾಯ, ಮಂಗಳೂರು ವಿಶ್ವವಿದ್ಯಾನಿಲಯ |
| 2 | ಸ್ನಾತಕೋತ್ತರ ಸಂಖ್ಯಾಶಾಸ್ತ್ರ ಅಧ್ಯಯನ ವಿಭಾಗ | ಪ್ರಭಾರ ಅಧ್ಯಕ್ಷರು (ದಿನಾಂಕ 01.07.2019 ರಿಂದ ಮುಂದಿನ ಆದೇಶದವರೆಗೆ) | ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಮಂಗಳೂರು ವಿಶ್ವವಿದ್ಯಾನಿಲಯ |
| 3 | ಸ್ನಾತಕೋತ್ತರ ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ಅಧ್ಯಯನ ವಿಭಾಗ | ಪ್ರಭಾರ ಅಧ್ಯಕ್ಷರು (ದಿನಾಂಕ 01.07.2019 ರಿಂದ ಮುಂದಿನ ಆದೇಶದವರೆಗೆ) | ಡೀನರು, ವಿಜ್ಞಾನ ಮತ್ತು ತಂತ್ರಜ್ಞಾನ ನಿಕಾಯ, ಮಂಗಳೂರು ವಿಶ್ವವಿದ್ಯಾನಿಲಯ |
| 4 | ಸ್ನಾತಕೋತ್ತರ ಕನ್ನಡ ಅಧ್ಯಯನ ವಿಭಾಗ | ಅಧ್ಯಕ್ಷರು (ದಿನಾಂಕ 01.07.2019 ರಿಂದ 30.06.2021 ರವರೆಗೆ) | ಪ್ರೊ. ಅಭಯಕುಮಾರ್ ಕೆ., ಪ್ರಾಧ್ಯಾಪಕರು, ಸ್ನಾತಕೋತ್ತರ ಕನ್ನಡ ವಿಭಾಗ |
| 5 | ಸ್ನಾತಕೋತ್ತರ ವಸ್ತು ವಿಜ್ಞಾನ ಅಧ್ಯಯನ ವಿಭಾಗ | ಅಧ್ಯಕ್ಷರು (ದಿನಾಂಕ 01.07.2019 ರಿಂದ 30.06.2021 ರವರೆಗೆ) | ಪ್ರೊ. ಮಂಜುನಾಥ ಪಟ್ಟಾಭಿ, ಪ್ರಾಧ್ಯಾಪಕರು, ಸ್ನಾತಕೋತ್ತರ ವಸ್ತು ವಿಜ್ಞಾನ ವಿಭಾಗ |
| 6 | ಸ್ನಾತಕೋತ್ತರ ಕೈಗಾರಿಕಾ ರಸಾಯನಶಾಸ್ತ್ರ ಅಧ್ಯಯನ ವಿಭಾಗ | ಅಧ್ಯಕ್ಷರು (ದಿನಾಂಕ 01.07.2019 ರಿಂದ 30.06.2021 ರವರೆಗೆ) – | ಪ್ರೊ. ಸರೋಜಿನಿ ಬಿ.ಕೆ., ಪ್ರಾಧ್ಯಾಪಕರು, ಸ್ನಾತಕೋತ್ತರ ಕೈಗಾರಿಕಾ ರಸಾಯನಶಾಸ್ತ್ರ ಅಧ್ಯಯನ ವಿಭಾಗ |

ಸ್ನಾತಕೋತ್ತರ ವಿಭಾಗಗಳ ಪ್ರಭಾರ ಅಧ್ಯಕ್ಷರಾಗಿ ಪ್ರಾಧ್ಯಾಪಕರು/ಡೀನರನ್ನು ನೇಮಕಗೊಳಿಸಿದಲ್ಲಿ ಸದರಿಯವರು ಕರ್ತವ್ಯ ನಿರ್ವಹಿಸಿದ ಅವಧಿಯನ್ನು Vacation prevented staff ಎಂದು ಪರಿಗಣಿಸಿ ಬಿಡುವು ರಜೆ ತಡೆಗೆ ಹೆಚ್ಚುವರಿ ಗಳಿಕೆ ರಜಾ ಸೌಲಭ್ಯವನ್ನು ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಸಿಂಡಿಕೇಟ್ :**ಸಾ.ಸ.2:27(2019)

**ವಿಷಯ :** ಸ್ನಾತಕೋತ್ತರ ಜಿಯೋ ಇನ್‌ಫಾರ್ಮೆಟಿಕ್ಸ್ ಅಧ್ಯಯನ ಮಂಡಳಿಯ ಪುನರ್‌ರಚನೆಯ ಬಗ್ಗೆ.

**ನಿರ್ಣಯ:** ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಾರ್ವತ್ರಿಕ:**ಸಾ.ಸ.2: 28(2019)

**ವಿಷಯ :** ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ವಾರ್ಷಿಕ ಸಂಚಿಕೆ "ಮಂಗಳ ಗಂಗೆ" ಮುದ್ರಣದ ಕುರಿತು.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಆಡಳಿತ:**ಸಾ.ಸ.2: 29(2019)

**ವಿಷಯ :** 2019-20ನೇ ಸಾಲಿಗೆ ಗಣಕಯಂತ್ರ/ಪ್ರಿಂಟರ್‌ಗಳ ವಾರ್ಷಿಕ ನಿರ್ವಹಣೆ ಗುತ್ತಿಗೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ: ಪಿಎಂಇಬಿ:**ಸಾ.ಸ.2: 30(2019)

**ವಿಷಯ :** ರೂಸಾ ಅನುದಾನದಲ್ಲಿ Gas Chromatograph – Mass Spectrometer ಉಪಕರಣ ಖರೀದಿಗೆ ಪ್ರಸ್ತಾವನೆ ಬಗ್ಗೆ.

**ನಿರ್ಣಯ:** ಖರೀದಿ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

ಮಾನ್ಯ ಕುಲಪತಿಯವರು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

ಸಹಿ/- ಸಹಿ/-

**ಕುಲಸಚಿವರು** **ಕುಲಪತಿಗಳು**